೧	೨	೩	೪
ಆಡಳಿತ ವಿಭಾಗ	೧	—	೯
ತಾಂತ್ರಿಕ ಸಿಬ್ಬಂದಿ	೯	—	೯
ಉತ್ಪಾದನಾ ವಿಭಾಗದ ದಿನಗೂಲಿ ಕಾರ್ಮಿಕರು	೩೦	೭೬	೧೦೬
ಇತರೆ ದಿನಗೂಲಿ ಕೆಲಸಗಾರರು	೯	—	೯
	೪೯	೭೬	೧೨೫

ಹಿಂದಂಳಿದ ವರ್ಗಗಳ ಹಾಸ್ಟೆಲ್‌ಗಳ ಬಗ್ಗೆ

೧೩೨೬ (೨೩೬೯) ಶ್ರೀ ಚಂದ್ರಶೇಖರ್ ಮಾಮನಿ (ಪರಸಗಡ).—ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸವದತ್ತಿ ತಾಲ್ಲೂಕಿನ ಮಾನವಳ್ಳಿ, ಹಂಚಿನಾಳ ಮತ್ತು ಶಿರಸಂಗಿಯಲ್ಲಿ ಹಾಸ್ಟೆಲ್‌ಗಳ ಕಟ್ಟಡ ಗಳನ್ನು ನಿರ್ಮಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ ?

ಆ) ಸವದತ್ತಿ ತಾಲ್ಲೂಕಿನ ತಲ್ಲೂರ ಮತ್ತು ಆಸುಂಡಿ ಗ್ರಾಮಗಳಿಗೆ ಹಿಂದುಳಿದ ವರ್ಗಗಳ ಹಾಗೂ ಅಲ್ಪ ಸಂಖ್ಯಾಂತರ ಹಾಸ್ಟೆಲ್‌ಗಳನ್ನು ಪ್ರಾರಂಭಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ?

ಇ) ಹಾಗಿದ್ದಲ್ಲಿ, ಈ ಹಾಸ್ಟೆಲ್‌ಗಳು ಪ್ರಾರಂಭವಾಗುವ ಬಗ್ಗೆ ಸರ್ಕಾರವು ಕೈಗೊಂಡ ಕ್ರಮ ಗಳೇನು ?

ಶ್ರೀ ಜಿ. ಬಸವಣಪ್ಪ (ಸಮಾಜ ಕಲ್ಯಾಣ ಸಚಿವರು).—

(ಅ) ಇಲ್ಲ.

(ಆ) ಪರಿಶೀಲನೆಯಲ್ಲಿದೆ.

(ಇ) ''ಅ'' ಗೆ ಕೊಟ್ಟಿರುವ ಉತ್ತರದಿಂದ ಉದ್ಭವಿಸುವುದಿಲ್ಲ.

ಕುಂದಾಪುರದಲ್ಲಿರುವ ಪೆಂಟ್ರಿಕ್ ನಂತರದ ವಿದ್ಯಾರ್ಥಿನಿಲಯಕ್ಕೆ ಸ್ವಂತ ಕಟ್ಟಡ ಕುರಿತು

೧೩೨೭ (೨೩೧೪) ಶ್ರೀ ಬಿ. ಎಸ್. ಆಚಾರ್ (ಬೈಂದೂರ್).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕುಂದಾಪುರದಲ್ಲಿರುವ ಪದವಿ ಪೂರ್ವ ವಿದ್ಯಾರ್ಥಿ ನಿಲಯ ಬಾಡಿಗೆ ಕಟ್ಟಡದಲ್ಲಿ ಸಾಕಷ್ಟು ಸ್ಥಳಾವಕಾಶ ಇಲ್ಲವೆಂಬುದು ನಿಜವೇ ?

ಆ) ಸದರಿ ನಿಲಯಕ್ಕೆ ಸ್ವಂತ ಕಟ್ಟಡ ಕಟ್ಟಿಸಲು ಸರ್ಕಾರದವರು ಕೈಕೊಂಡ ಕ್ರಮಗಳೇನು ?

ಶ್ರೀ ಜಿ. ಬಸವಣಪ್ಪ (ಸಮಾಜ ಕಲ್ಯಾಣ ಸಚಿವರು).—

(ಅ) ಹೌದು.

(ಆ) ಸೂಕ್ತವಾದ ನಿವೇಶನ ದೊರೆತ ಕೂಡಲೆ ವಿದ್ಯಾರ್ಥಿನಿಲಯದ ಕಟ್ಟಡ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು.

ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳ ಬಗ್ಗೆ

೧೩೨೮ (೨೧೬೩) ಶ್ರೀಮತಿ ಸುಮಾವಸಂತ್ (ವಿರಾಜಪೇಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಕೊಡಗಿನಲ್ಲಿರುವ ಹಿಂದುಳಿದ ವರ್ಗಗಳ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ?

ಆ) ಆ ಪೈಕಿ ಹಾಸ್ಟೆಲ್‌ಗಳ ತನ್ನದೇ ಆದ ಸ್ವಂತ ಕಟ್ಟಡ ಹೊಂದಿರುವ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ?